ಸಾರ್ವಜನಿಕ ಆರೋಗ್ಯ ಖಾತೆಯ ಅಮಲದಾರರಿಗೆ ಸೂಚನೆಗಳು.

ಸಾರ್ವಜನಿಕ ಆರೋಗ್ಯದ ಅಸಿಸ್ಟಂಟ್ ಡಾಯರೆಕ್ಟರನು ಜಿಲ್ಲಾ ಸಂಸ್ಥೆಯ ಸಭಾಸದನೆಂಬ ನಾತೆಯಿಂದ ಜಿಲ್ಲಾ ಸಂಸ್ಥೆಗಳಿಗೆ, ಕೆಲಸದ ಕಾರ್ಯಕ್ರಮವನ್ನು ತಯಾರಿಸಲಿಕ್ಕೂ, ಕೆಲಸವನ್ನು ಪ್ರಾರಂಭದಲ್ಲಿ ಯಾವ ಗ್ರಾಮಗಳಲ್ಲಿ ಕೈಕೊಳ್ಳ ತಕ್ಕದ್ದೋ ಆ ಗ್ರಾಮಗಳನ್ನು ಆರಿಸುವದಕ್ಕೂ ಸಹಾಯ ಮಾಡಬೇಕು. ಈ ಉದ್ದೇಶಕ್ಕಾಗಿ, ಕಲೆಕ್ಟರರು ಅಸಿಸ್ಟಂಟ್ ಡಾಯರೆಕ್ಟರರ ಆಲೋಚನೆಯನ್ನು ಪಡೆದು, ಸದರಿ ಸಂಸ್ಥೆಯ ಸಭೆಗಳ ತಾರೀಖುಗಳನ್ನು ಗೊತ್ತುಪಡಿಸತಕ್ಕದ್ದು. ಅಸಿಸ್ಟಂಟ್ ಡಾಯರೆಕ್ಟರನು ಹಾಜರಾಗಲಿಕ್ಕೆ ಅಸಮರ್ಥನಾದರೆ, ಅವನು ತನ್ನ ಶಿಫಾರಸನ್ನು ಕಲೆಕ್ಟರನ ಕಡೆಗೆ ಬರಹಮೂಲಕವಾಗಿ ಕಳುಹಿಸಿಕೊಡಬೇಕು. ಅಸಿಸ್ಟಂಟ್ ಡಾಯರೆಕ್ಟರರು ಕಮಿಶನರರ ಮತ್ತು ಕಲೆಕ್ಟರರ ಕೂಡ ನಿಕಟ ಸಂಬಂಧವನ್ನಿಡತಕ್ಕದ್ದು. ಅವರು ಕೆಲಸದ ಪ್ರಗತಿಯನ್ನು ಕಾಳಜಿಯಿಂದ ನೋಡುತ್ತಿರಬೇಕು ಮತ್ತು ಅವಶ್ಯ ವಿದ್ದಾಗ ಸೂಚನೆಗಳನ್ನು ಕೊಡಬೇಕು.

ಜಿಲ್ಲೆಯ ಆರೋಗ್ಯದ ಅಮಲದಾರನು ಹೆಚ್ಚು ಪ್ರತ್ಯಕ್ಷವಾದ ಸಹಾಯ ಮಾಡಲಿಕ್ಕೆ ಸಮರ್ಥನಾಗುವನು. ಆರೋಗ್ಯದ ಅಮಲದಾರನು ನೇಮಿಸಲ್ಪಟ್ಟಿದ್ದ ಜಿಲ್ಲೆಗಳಲ್ಲಿ ಅವನು, ಸಾರ್ವಜನಿಕ ಆರೋಗ್ಯದ ಅಸಿಸ್ಟಂಟ್ ಡಾಯರೆಕ್ಟರನ ಬದಲಾಗಿ ಜಿಲ್ಲಾ ಸಂಸ್ಥೆಯ ಸಭಾಸದನಾಗಿರಬೇಕು, ಮತ್ತು ಜಿಲ್ಲಾ ಸಂಸ್ಥೆಯ ಯಾವತ್ತು ಸಭೆಗಳಲ್ಲಿ ಹಾಜರಿರಬೇಕು. ಅವನು ಬೇರೆ ಬೇರೆ ಗ್ರಾಮಗಳಲ್ಲಿ ಪ್ರಾರಂಭಿಸಲ್ಪಟ್ಟ ಕೆಲಸವನ್ನು ಸಾಧ್ಯವಿದ್ದಷ್ಟು ಸಾರೆ ತಪಾಸಿಸಬೇಕು ಮತ್ತು ಆರೋಗ್ಯ ಮತ್ತು ಸ್ವಚ್ಛತೆಗಳಿಗೆ ಸಂಬಂಧವಿರುವ ಮಟ್ಟಿಗೆ ಸದರಿ ಚಳವಳಿಗೆ ಮಾರ್ಗದರ್ಶಕನಾಗಬೇಕು.

ಆರೋಗ್ಯದ ಮತ್ತು ಮೈಲಿಯ ಇನ್ಸ್‌ಪೆಕ್ಟರನು, ಪಂಚಾಯತಗಳು ಮತ್ತು ಸ್ಯಾನಿಟರಿ ಕಮಿಟಿಗಳು ಸ್ಥಾಪಿಸಲ್ಪಟ್ಟ ಗ್ರಾಮಗಳಿಗೆ ವರ್ಷಕ್ಕೊಮ್ಮೆಯಾದರೂ, ಹಾಗೂ ಪಂಚಾಯತಗಳು ಸ್ವಚ್ಛತೆಯ ವಿಷಯದಲ್ಲಿ ತನಗೆ ಆಲೋಚನೆ ಕೊಡ ಬೇಕೆಂದು ಅವನಿಗೆ ವಿನಂತಿ ಮಾಡಿದಾಗ್ಗೆಲ್ಲ, ಭೆಟ್ಟಿ ಕೊಡಬೇಕು. ಅವನು ತನ್ನ ಫಿರತಿಯ ಕಾಲದಲ್ಲಿ ಪಂಚಾಯತಗಳನ್ನು ಸ್ಥಾಪಿಸಲಿಕ್ಕೆ ಗ್ರಾಮಗಳ ಮನವೊಲಿಸ ತಕ್ಕದ್ದು, ಮತ್ತು ತನಗೆ ಸಂಧಿ ದೊರೆತ ಹಾಗೆಲ್ಲ ಆರೋಗ್ಯದ ಮತ್ತು ಸ್ವಚ್ಛತೆಯ ಮೂಲತತ್ವಗಳನ್ನು ಗ್ರಾಮನಿವಾಸಿಗಳಿಗೆ ತಿಳಿಸಿ ಹೇಳಬೇಕು. ಅವನು ಪ್ರತಿ ತಿಂಗಳಲ್ಲಿ ಅಸಿಸ್ಟಂಟ್ ಡಾಯರೆಕ್ಟರರಿಗೆ ಮಾಡುವ ರಿಪೋರ್ಟುಗಳಲ್ಲಿ ಸದರಿ ಚಳವಳಿಯ ಪ್ರಗತಿಯ ವಿಷಯದಲ್ಲಿ ಬರೆಯಬೇಕು.

ಮೈಲಿ ತೆಗೆಯುವವನು ಗ್ರಾಮನಿವಾಸಿಗಳೊಡನೆ ನಿಕಟವಾದ ಸಂಬಂಧ ವನ್ನಿಡುತ್ತಾನೆ ಮತ್ತು ಅವರಿಗೆ ಅವನ ಕೆಲಸದ ಮಹತ್ವವು ತಿಳಿದುಹೋಗಿದೆ. ಅವನು ಪೊಲೀಸ ಗೌಡನ ಸಹಾಯದಿಂದ ಗ್ರಾಮನಿವಾಸಿಗಳನ್ನು ಒಟ್ಟುಗೂಡಿಸಿ, ಸ್ವಚ್ಛತೆಯ ವಿಷಯಗಳನ್ನೂ, ಸಾಂಕ್ರಾಮಿಕ ರೋಗಗಳ ಪ್ರಸಾರದ ಮಾರ್ಗಗಳನ್ನೂ, ಅವನ್ನು ಪ್ರತಿಬಂಧಿಸುವ ಉಪಾಯಗಳನ್ನೂ ಕುರಿತು ಅವರಿಗೆ ಬೋಧ ಕೊಡಬೇಕು. ಅವನು ತನ್ನ ಈ ಕೆಲಸದ ಬಗ್ಗೆ ಆರೋಗ್ಯದ ಮತ್ತು ಮೈಲಿಯ ಇನ್ಸ್‌ಪೆಕ್ಟರರಿಗೆ ವಾರಕ್ಕೊಮ್ಮೆ ರಿಪೋರ್ಟು ಮಾಡಬೇಕು.

ಯಾವತ್ತು ಅನುಲದಾರರು ಮತ್ತು ಅವರ ತಾಬೇದಾರರು, ಪ್ರಚಾರ ಕಾರ್ಯವನ್ನು ಮತ್ತು ಲೋಕಕಲ್ಯಾಣದ ಕೆಲಸವನ್ನು ಸ್ವೇಚ್ಛೆಯಿಂದ ಮಾಡುತ್ತಿರುವ ಬೇರೆ ಬೇರೆ ಸಂಸ್ಥೆಗಳೊಡನೆ ನಿಕಟ ಸಹಕಾರದಿಂದ ಕೆಲಸ ಮಾಡಬೇಕು, ಮತ್ತು ಸಾರ್ವಜನಿಕ ಆರೋಗ್ಯದ ಅಸಿಸ್ಟಂಟ್ ಡಾಯರೆಕ್ಟರರು, ಬೇರೆ ಬೇರೆ ಗ್ರಾಮಗಳಲ್ಲಿ ಈ ಸಂಸ್ಥೆಗಳು ಮಾಡಬಹುದಾದ ಕೆಲಸದ ಉದ್ದೇಶವನ್ನು ಅವುಗಳ ಲಕ್ಷ್ಯಕ್ಕೆ ತರಬೇಕು.